**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**LAC** 5/2024 **PW**-1

**ದಿಃ17.07.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ವಕೀಲರಾದ ಶ್ರೀ ಎಸ.ಸಿ.ವೈರವರಿಂದ.**

ನನ್ನ ಮುಖ್ಯ ವಿಚಾರಣೆಯಲ್ಲಿ ಇರುವ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಭೂಸ್ವಾಧೀನಗೊಂಡಿರುವ ಆಸ್ತಿಗೆ ನಾನು ನಿರಂತರ ಭೂಬಾಡಿಗೆದಾರನಿರುತ್ತೇನೆ. ಐ-ತೀರ್ಪುನ್ನು ನೀವು ಓದಿರುತ್ತೀರಾ ಎಂದರೆ ಸಾಕ್ಷಿ ಓದಿರುತ್ತೇನೆ ಎನ್ನುತ್ತಾರೆ. ನಮ್ಮ ಆಸ್ತಿಗೆ ಸಂಬಂಧಿಸಿದಂತೆ ದಿಃ17-05-2016 ರಂದು ಐ-ತೀರ್ಪು ಪಾಸ ಆಗಿದೆ ಎಂದರೆ ಸರಿ. ಅದೇ ರೀತಿ ದಿಃ20-09-2016 ರಂದು ನಮ್ಮ ಐ-ತೀರ್ಪು ಘೋಷಣೆ ಆಯಿತು ಎಂದರೆ ಸಾಕ್ಷಿ ನಂತರ ಗೊತ್ತಾಯಿತು ಎನ್ನುತ್ತಾರೆ. ಭೂಸ್ವಾಧೀನ ಅಧಿಕಾರಿಗಳ ಬಳಿ ನನಗೆ ನೋಟಿಸ ಕಳುಹಿಸಿದ ಬಗ್ಗೆ ಪಾವತಿಗಳು ಇವೆ ಎಂದರೆ ಸಾಕ್ಷಿ ನನಗೆ ನೋಟೀಸ ಮುಟ್ಟಿಲ್ಲ ಎನ್ನುತ್ತಾರೆ. ಆವಾರ್ಡ ಪಾಸ ಆದ 6 ವಾರಗಳಲ್ಲಿ ನಾನು ಅರ್ಜಿ ಸಲ್ಲಿಸಬೇಕಾಗಿತ್ತು ಆದರೆ 8 ವರ್ಷಗಳ ನಂತರ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿರುತ್ತೇನೆಂದರೆ ಸಾಕ್ಷಿ ನಮಗೆ ಇಷ್ಟೆ ಅವಧಿಯಲ್ಲಿ ಕೇಸ ದಾಖಲಿಸಬೇಕು ಎಂಬ ಬಗ್ಗೆ ಮಾಹಿತಿ ಇರಲಿಲ್ಲ ಎನ್ನುತ್ತಾರೆ. ಈ ಕಾರಣಕ್ಕಾಗಿ ನಾನು ದಾವಾ ಸಲ್ಲಿಸುವುದು 8 ವರ್ಷ ವಿಳಂಬವಾಗಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

ನನ್ನ ಹಾಗೂ ಮಾಲೀಕರ ಮಧ್ಯ ವಿವಾದ ಇತ್ತಾ ಎಂದರೆ ಸಾಕ್ಷಿ ಮೀಸಲೇನಿಯಸ್ ನಂಬರ 18/2023 ಇತ್ತು ಎನ್ನುತ್ತಾರೆ. ಸದರಿ ಮೀಸಲೇನಿಯಸ ರಾಜಿ ಪ್ರಕಾರ ಮುಕ್ತಾಯಗೊಂಡಿದೆ. ಸದರಿ ಮೀಸಲೇನಿಯಸ್ ನಂಬರ 18/2023 ರಲ್ಲಿ ಅವಾರ್ಡ ಆಗಿದೆ ಎಂಬುವುದು ನನಗೆ ಗೊತ್ತಿತ್ತು ಎಂದರೆ ಸರಿ. 8 ವರ್ಷಗಳ ಕಾಲ ವಿಳಂಬ ಆಗಿದ್ದಕ್ಕೆ ಎನಾದರೂ ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎನ್ನುತ್ತಾರೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ ನಂಬರ 3 ರಲ್ಲಿ ನಾನು ಮೇ ಮತ್ತು ಜೂನ್ 2025 ಚಾರದಾಮ್ ಯಾತ್ರಾಗೆ ಹೋಗಿದ್ದೆ ಎಂದು ಬರೆಸಿದ್ದೆ ಎಂದರೆ ಸರಿ. ಪ್ರಸ್ತುತ ಪ್ರಕರಣವನ್ನು ನಾನು ದಿಃ15-08-2024 ರಂದು ಸಲ್ಲಿಸಿದ್ದೇನೆ ಎಂದರೆ ಸರಿ. ನಾನು ಬರೆಸಿರುವ ಪ್ರಮಾಣ ಪತ್ರದ 3 ನೇ ಖಂಡಿಕೆಯಲ್ಲಿರುವ ವಿಷಯಕ್ಕೂ ಈ ಪ್ರಕರಣ ವಿಳಂಬವಾಗುವುದಕ್ಕೂ ಒಂದಕ್ಕೊಂದು ನೇರ ಸಂಬಂಧ ಇಲ್ಲ ಎಂದರೆ ಸಾಕ್ಷಿ ಹೋಗಿ ಬಂದಿದ್ದೇನೆ ಎಂದು ಮಾತ್ರ ಹೇಳಿರುತ್ತೇನೆ, ಅದಕ್ಕೂ ಕೇಸಗೂ ಯಾವುದೇ ಸಂಬಂಧ ಇಲ್ಲ ಎನ್ನುತ್ತಾರೆ. ನಾನು 2025 ರ ಮೇ ಹಾಗೂ ಜೂನ್ ತಿಂಗಳಿನಲ್ಲಿ ಯ್ಯಾತ್ರೆಗೆ ಹೋಗಿದ್ದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ದಾಖಲೆಗಳು ಇವೆ ಆದರೆ ಹಾಜರುಪಡಿಸಿಲ್ಲ

ಎನ್ನುತ್ತಾರೆ. ನನ್ನ Delay ಅರ್ಜಿಯಲ್ಲಿ 2016 ರಿಂದ 2024 ರವರೆಗೆ ಕಾಲ ವಿಳಂಬ ಯಾಕೆ ಆಗಿದೆ ಎಂಬುವುದನ್ನು ಬರೆಸಿಲ್ಲ ಎಂದರೆ ಸಾಕ್ಷಿ ಬರೆಸಿದ್ದೇನೆ ಎನ್ನುತ್ತಾರೆ. ನಾನು ಬರೆಸಿರುವ ಕಾರಣಗಳು ಸರಿಯಾದ ಕಾರಣಗಳೆ ಅಲ್ಲ ಅವು ಇದ್ದರು ಕೂಡಾ ಕೇಸ ಸಲ್ಲಿಸಬಹುದಿತ್ತು ಎಂದರೆ ಸಾಕ್ಷಿ ಅವಾರ್ಡ ಆಗಿಲ್ಲ ಎಂತಲೆ ನಾವು ಕಾಯತ್ತಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ.

ಸದರಿ ಪರಿಹಾರದ ಹಣವನ್ನು ಯಾರು ಪಡೆದರು ಎಂದರೆ ಸಾಕ್ಷಿ ನಾನು ಹಾಗೂ ಮಾಲೀಕರು 2 ವರ್ಷಗಳ ಹಿಂದೆ ಪಡೆದುಕೊಂಡಿದ್ದೇವೆ ಎನ್ನುತ್ತಾರೆ. ಎಷ್ಟೆಷ್ಟು ಹಣವನ್ನು ಪಡೆದಿದ್ದೀರಿ ಎಂದರೆ ಸಾಕ್ಷಿ ಮಾಲೀಕರಿಗೆ ಶೇಕಡಾ 35 ರಷ್ಟು ನನಗೆ ಶೇಕಡಾ 65 ರಷ್ಟು ಹಣ ತೆಗೆದುಕೊಂಡಿರುತ್ತೇವೆ ಎನ್ನುತ್ತಾರೆ. ದಿಃ24-10-2016 ರಂದು ನಮಗೆ ಕೆಆರಡಿಸಿಎಲ್ ನಿಂದ ನೋಟೀಸ ನೀಡಿದ್ದು ಅದನ್ನು ನಾನು ಸಹಿ ಮಾಡಿ ತೆಗೆದುಕೊಂಡಿದ್ದೇನೆಂದು ಸಾಕ್ಷಿಗೆ ಒಂದು ಜರಾಕ್ಸ ಪ್ರತಿಯ ನೋಟೀಸ ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ನನ್ನ ಸಹಿ ಬದಲಿದೆ ಅನ್ನಿಸುತ್ತಿದೆ ಎನ್ನುತ್ತಾರೆ. 2016 ರಲ್ಲಿಯೇ ನಮಗೆ ನೋಟಿಸ ಕೊಟ್ಟಿದ್ದರು ಮತ್ತು ಅದನ್ನು ನಾನು ಸ್ವೀಕರಿಸಿದ್ದರು ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಸರಿ ಅಲ್ಲ ಎನ್ನುತ್ತಾರೆ. 8 ವರ್ಷಗಳ ಕಾಲವಿಳಂಬ ಇದ್ದರು ನಾನು ಯಾವುದೇ ಸರಿಯಾದ ಕಾರಣಗಳನ್ನು ತೋರಿಸಿಲ್ಲ ಆ ಕಾರಣಕ್ಕೆ ನನ್ನ ಅರ್ಜಿ ಊರ್ಜಿತವಲ್ಲವೆಂದರೆ ಸಾಕ್ಷಿ ನಮಗೆ ನೋಟೀಸ ಬಂದಿಲ್ಲದಿರುವುದು ನಿಜ ಇದೆ ಎನ್ನುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ